# ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕುಣಿಗಲ್

## ಸಿ.ಸಿ.1075/2018

ಪಿರ್ಯಾದುದಾರರು : ಕುಣಿಗಲ್ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ : ನಾರಾಯಣ

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ

**ಪ್ರಶ್ನೆ-1:-**ಇದುವರೆವಿಗೂ ನ್ಯಾಯಾಲಯದಲ್ಲಿ ಆದ ಸಾಕ್ಷಿ ವಿಚಾರಣೆಯನ್ನು ಕೇಳಿಸಿಕೊಂಡಿದ್ದೀರಾ?

**ಉತ್ತರಃ-**

**ಪ್ರಶ್ನೆ-2:-ಫ್ರಾಸಾ-1 ಸಲಾಮ್ ಪಾಷ ರವರು ತಮ್ಮ ಸಾಕ್ಷ್ಯದಲ್ಲಿ** ದಿನಾಂಕಃ 28.06.2018 ರಂದು ಬೆಳಿಗ್ಗೆ 10.30 ರ ಸಮಯದಲ್ಲಿ ತಾನು ಯಡಿಯೂರು ಕಡೆಯಿಂದ ಊರಿಗೆ ಹೋಗಲು ತಾನು ಮತ್ತು ಚಾಸಾ.3 ರವರು ದ್ವಿಚಕ್ರ ವಾಹನದಲ್ಲಿ ಬರುತ್ತಿರುವಾಗ್ಗೆ ಬಿಳಿದೇವಾಲಯ ಗ್ರಾಮದ ತೋಟಗಾರಿಕೆ ಇಲಾಖಾ ಮುಂಭಾಗ ಕುಣಿಗಲ್ ಕಡೆಯಿಂದ ಯಡಿಯೂರು ಕಡೆಗೆ ಬರುತ್ತಿದ್ದ ಬಸ್ ಸಂಖ್ಯೆ ಕೆಎ-06-ಎಫ್-922 ರ ಬಸ್ಸು ಮುಂದೆ ಹೋಗುತ್ತಿದ್ದ ವಾಹನವನ್ನು ಹಿಂದಿಕ್ಕಲು ಅತಿವೇಗವಾಗಿ ಚಾಲನೆ ಮಾಡಿಕೊಂಡು ಬಂದು ತಮ್ಮ ದ್ವಿಚಕ್ರ ವಾಹನಕ್ಕೆ ಎದರುಗಡೆಯಿಂದ ಡಿಕ್ಕಿ ಹೊಡೆದು ಅಪಘಾತಪಡಿಸಿದ ಪರಿಣಾಮ ತನಗೆ ತರಚಿದ ಗಾಯಗಳಾಗಿದ್ದು, ಚಾಸಾ-3 ರವರಿಗೆ ಬಲಗಾಲಿನ ಮೂಳೆ ಮುರಿದಿದ್ದು, ಚಾಸಾ-2 ರವರು ಸ್ಥಳಕ್ಕೆ ಬಂದು ತಮ್ಮನ್ನು ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ದಾಖಾಲಿಸಿ, ಹೆಚ್ಚಿನ ಚಿಕಿತ್ಸೆಗಾಗಿ ತಮಕೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದು, 2 ದಿನಗಳ ನಂತರ ಅಂದರೆ ದಿನಾಂಕಃ 30.06.2018 ರಂದು ಕುಣಿಗಲ್ ಪೋಲಿಸ್ ಠಾಣೆಯಲ್ಲಿ ಈ ಸಂಬಂಧವಾಗಿ ನಿಪಿ.1 ರಂತೆ ದೂರು ನೀಡಿದ್ದು, ದಿನಾಂಕಃ 01.07.2018 ರಂದು ಘಟನಾ ಸ್ಥಳಕ್ಕೆ ಹೋಗಿ ಚಾಸಾ-2 ರವರ ಸಮಕ್ಷಮ ಬೆಳಿಗ್ಗೆ 8.30 ರಿಂದ 9.00 ರ ರವರೆಗೆ ನಿಪಿ.2 ರಂತೆ ಸ್ಥಳ

ಪಂಚನಾಮೆ ಮಾಡಿರುವುದಾಗಿ ನುಡಿದಿರುತ್ತಾರೆ **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ?**

**ಉತ್ತರಃ–**

**ಪ್ರಶ್ನೆ–3:–ಫ್ರಾಸಾ–2 ಮುಬಾರಕ್ ಪಾಷ ರವರು ತಮ್ಮ ಸಾಕ್ಷ್ಯದಲ್ಲಿ** ಸುಮಾರು 6 ವರ್ಷಗಳ ಹಿಂದೆ ಬೆಳಿಗ್ಗೆ 10–11 ಗಂಟೆಯ ಸಮಯದಲ್ಲಿ ಚಾಸಾ.1 ಮತ್ತು ಒಬ್ಬ ಮಹಿಳೆ ಮತ್ತು ಒಂದು ಮಗು ದ್ವಿ ಚಕ್ರ ವಾಹನದಲ್ಲಿ ಹಾಲಪ್ಪನ ಗುಡ್ಡೆ ಕಡೆಯಿಂದ ಕುಣಿಗಲ್ ಕಡೆಗೆ ಹೋಗುತ್ತಿದ್ದು, ಆ ಸಮಯದಲ್ಲಿ ಒಂದು KSRTC ಬಸ್ ಕುಣಿಗಲ್ ಕಡೆಯಿಂದ ಹಾಲಪ್ಪನ ಗುಡ್ಡೆ ಕಡೆಗೆ ಹೋಗುತ್ತಿದ್ದಾಗ KSRTC ಬಸ್ ಹಿಂಬದಿಯಿಂದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡೆಸಿ ಹೊರಟು ಹೋಗಿದ್ದು, ತಾವು ಹಿಂದೆಯೇ ಬರುತ್ತಿದ್ದು, ಅಪಘಾತವನ್ನು ನೋಡಿ ಆ ನಂತರ ಅವರನ್ನು ಆಸ್ಪತ್ರೆಗೆ ಕಳುಹಿಸಿ, ಒಂದು ವಾರದ ನಂತರ ಘಟನಾ ಸ್ಥಳಕ್ಕೆ ಕರೆಸಿ ಪರಿಶೀಲನೆ ಮಾಡಿದ್ದು, ಆ ನಂತರ ಠಾಣೆಗೆ ಬಂದು ಸಹಿ ಮಾಡಿ, ಘಟನಾ ಸ್ಥಳವು ಬಿಳಿ ದೇವಾಲಯದಿಂದ ಸ್ವಲ್ಪ ಮುಂದೆ ರೇಷ್ಮೆ ಕೃಷಿ ಇಲಾಖೆಯ ಕಛೇರಿಯ ಮುಂದೆ ಆಗಿದ್ದು, ನಿಪಿ.2 ರ ಸ್ಥಳ ಪಂಚನಾಮೆಗೆ ಸಹಿ ಮಾಡಿದ್ದು, ಅಪಘಾತವಾದ ಒಂದು ವಾರದ ನಂತರ ಪೋಲಿಸರು ಘಟನಾ ಸ್ಥಳಕ್ಕೆ ಕರೆಸಿ ವಿಚಾರಣೆ ಮಾಡಿ ಸಹಿ ಪಡೆದಿರುವುದಾಗಿ ನುಡಿದಿರುತ್ತಾರೆ **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ?**

**ಉತ್ತರಃ–**

**ಪ್ರಶ್ನೆ–4:–ಫ್ರಾಸಾ–3 ಆಸ್ಮಾ ರವರು ತಮ್ಮ ಸಾಕ್ಷ್ಯದಲ್ಲಿ** ಸುಮಾರು ಐದು ವರ್ಷಗಳ ಹಿಂದೆ ತನ್ನ ತವರು ಮನೆ ಇರುವ ಯಡಿಯೂರು ನಿಂದ ಕುಣಿಗಲ್ ಗೆ ಚಾಸಾ.1 ರವರ ಜೊತೆ ಅವರ ದ್ವಿ ಚಕ್ರ ವಾಹನದಲ್ಲಿ ತಾನು ಅವರ ಹಿಂಬದಿ ಸವರಾಳಾಗಿ ಬರುತ್ತಿದ್ದಾಗ, ಬೆಳಿಗ್ಗೆ 10.30 ಗಂಟೆಗೆ ಬಿಳಿ ದೇವಾಲಯದ ಬಳಿ ಸರ್ಕಾರಿ ಬಸ್ ಬೇರೆ ವಾಹನವನ್ನು ಹಿಂದಿಕ್ಕಲು ಹೋಗಿ ತಮ್ಮ ವಾಹನಕ್ಕೆ ಡಿಕ್ಕಿಪಡಿಸಿದ್ದು, ಆಗ ತನ್ನ ಬಲಗಾಲಿನ ತೊಡೆ ಮೂಳೆ ಮುರಿದು ಹೋಗಿದ್ದು, ನಂತರ ತನ್ನನ್ನು ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಚಾಸಾ.1 ತನ್ನ ಗಂಡ ಕರೆದುಕೊಂಡು ಹೋಗಿ ಅಲ್ಲಿ ತನಗೆ ಚಿಕಿತ್ಸೆ ನೀಡಿ ನಂತರದಲ್ಲಿ ಶಸ್ತ್ರ ಚಿಕಿತ್ಸೆಯಾಗಿರುವುದಾಗಿ ನುಡಿದಿರುತ್ತಾರೆ **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ?**

**ಉತ್ತರಃ–**

**ಪ್ರಶ್ನೆ–5:–ಫ್ರಾಸಾ–5 ಡಾ.ನವೀನ್ ಆರ್ ರವರು ತಮ್ಮ ಸಾಕ್ಷ್ಯದಲ್ಲಿ** ದಿನಾಂಕಃ 28.06.2018 ರಂದು ಚಾಸಾ.3 ರವರು ತಮ್ಮ ಆಸ್ಪತ್ರೆಗೆ ಬೆಳಿಗ್ಗೆ 10.30 ರಲ್ಲಿ ಆದ ಅಪಘಾತದ ಹಿನ್ನಲೆಯೊಂದಿಗೆ ಚಿಕಿತ್ಸೆಗಾಗಿ

ಬಂದಿದ್ದು, ಅವರನ್ನು ಬೆಳಿಗ್ಗೆ 11.30 ಗಂಟೆಯ ಸಮಯದಲ್ಲಿ ಪರೀಕ್ಷಿಸಿದಾಗ ಚಾಸಾ.3 ರವರಿಗೆ ಬಲತೊಡೆಯ ಮೂಳೆ ಮುರಿದಿದ್ದು ಮತ್ತು ಬಲಗಾಲಿನ ಹತ್ತಿರ 2X1 ಸೆಂ.ಮೀ. ತರಚಿದ ಗಾಯ ಕಂಡು ಬಂದಿದ್ದು , ಆ ಗಾಯಗಳಲ್ಲಿ ಮೊದಲನೆಯ ತೀವ್ರ ಸ್ವರೂಪದ ಗಾಯ ಮತ್ತು ಎರಡನೇ ಗಾಯ ಸಾಮಾನ್ಯ ಸ್ವರೂಪದ ಗಾಯಗಳು ಹಾಗೂ ತಾಜಾ ಗಾಯಗಳಾಗಿದ್ದು, ಚಾಸಾ.3 ರವರಿಗೆ ಮೇಲಿನ ಗಾಯಗಳ ಕುರಿತು ನಿಪಿ.3 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುವುದಾಗಿ ನುಡಿದಿರುತ್ತಾರೆ **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ?**

**ಉತ್ತರಃ–**

**ಪ್ರಶ್ನೆ–6:–ಪ್ರಾಸಾ–6 ಆದಿನಾರಾಯಣ ರವರು ತಮ್ಮ ಸಾಕ್ಷ್ಯದಲ್ಲಿ** 12 ವರ್ಷಗಳಿಂದ ಕುಣಿಗಲ್ ನಲ್ಲಿ ಟಿಸಿಯಾಗಿ ಕೆಲಸ ಮಾಡುತ್ತಿದ್ದು, ತಮ್ಮ ಇಲಾಖೆ ಬಸ್ ಸಂ.ಕೆಎ–06–ಎಫ್–922 ಗೆ ಬೋರಲಿಂಗಯ್ಯನಪಾಳದ ಬಳಿ ಅಪಘಾತವಾಗಿದೆ ಎಂದು ತಮ್ಮ ಮೇಲಾಧಿಕಾರಿಗಳು ಮಾಹಿತಿ ನೀಡಿದ ಮೇರೆಗೆ ದಿನಾಂಕ 17.07.2018 ರಂದು ಪೊಲೀಸ್ ಠಾಣೆಗೆ ಹೋಗಿ ಆತೋರೈಸೇಷನ್ ಲೆಟರ್ ನ ಆಧಾರದ ಮೇಲೆ ತಮ್ಮ ಇಲಾಖಾ ಬಸ್ಸನ್ನು ನಿಪಿ.4 ರಂತೆ ನಷ್ಟಭರ್ತಿ ಪತ್ರ ಬರೆದುಕೊಟ್ಟು ಬಸ್ಸನ್ನು ವಶಪಡಿಸಿಕೊಂಡಿರುವುದಾಗಿ ನುಡಿದಿರುತ್ತಾರೆ **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ?**

**ಉತ್ತರಃ–**

**ಪ್ರಶ್ನೆ–7:–ಪ್ರಾಸಾ–7 ಸದಾಶಿವಯ್ಯ ರವರು ತಮ್ಮ ಸಾಕ್ಷ್ಯದಲ್ಲಿ** ದಿನಾಂಕಃ 30.06.2018 ರಂದು ತಾನು ಠಾಣಾ ಕರ್ತವ್ಯದಲ್ಲಿದ್ದಾಗ ಸಂಜೆ 7.00 ಗಂಟೆ ಸಮಯದಲ್ಲಿ ಚಾಸಾ.1 ರವರು ಠಾಣೆಗೆ ಹಾಜರಾಗಿ ನಿಪಿ.1 ರಂತೆ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ದಾಖಲಿಸಿ ನಿಪಿ.5 ರಂತೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ನಂತರ ದಿನಾಂಕ 01.07.2018 ರಂದು ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಚಾಸಾ.2 ಮತ್ತು 4 ರವರ ಸಮಕ್ಷಮ ಬೆಳಿಗ್ಗೆ 8.15 ರಿಂದ 9.00 ಗಂಟೆಯವರೆಗೆ ನಿಪಿ.2 ರಂತೆ ಸ್ಥಳ ಪಂಚನಾಮೆಯನ್ನು ಜರುಗಿಸಲಾಗಿದ್ದು, ಹಾಗೇ ಪಂಚನಾಮೆ ಸಮಯದಲ್ಲಿ ಅಪಘಾತಕ್ಕೀಡಾದ ವಾಹನ ಕೆಎ–06–ಇಎಲ್–1327 ಅನ್ನು ಅಮಾನತ್ತು ಪಡಿಸಿಕೊಂಡಿದ್ದು, ಅದೇ ರೀತಿ ಅಪಘಾತಪಡಿಸಿದ ಕೆಎ–06–ಎಫ್–922 ರ ಕೆ ಎಸ್ ಆರ್ ಟಿ ಸಿ ಬಸ್ಸು ಮತ್ತು ಅದರ ಚಾಲಕನನ್ನು ಹಾಜರುಪಡಿಸಲು ಚಾಸಾ.8 ರವರಿಗೆ ಆದೇಶಿಸಿ ಠಾಣೆಯ ಬಳಿ ಚಾಸಾ.8 ರವರು ತಂದು ಹಾಜರುಪಡಿಸಿದ ಬಸ್ಸನ್ನು ಪಂಚರಾದ ಚಾಸಾ.5 ಮತ್ತು 6 ರವರ ಸಮಕ್ಷಮ ನಿಪಿ.6 ರಂತೆ ಅಮಾನತುಪಡಿಸಿಕೊಂಡಿದ್ದು, ಸದರಿ ಕೆ ಎಸ್ ಆರ್ ಟಿ ಸಿ ಬಸ್ ನ ಚಾಲಕನಾದ

ಆರೋಪಿಯ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆಗೊಳಿಲಾಗಿದ್ದು, ನಂತರ ಚಾಸಾ.8 ರವರಿಂದ ಕೆ ಎಸ್ ಆರ್ ಟಿ ಸಿ ಬಸ್ಸನ್ನು ನಿಪಿ.4 ರಂತೆ ನಷ್ಟ ಭರ್ತಿ ಪ್ರಮಾಣ ಪತ್ರ ಪಡೆದು ಬಸ್ಸನ್ನು ಬಿಡುಗಡೆಗೊಳಿಸಿ, ದಿನಾಂಕ 03.07.2018 ರಂದು ವಶಪಡಿಸಿಕೊಂಡ ವಾಹನಗಳ ಕುರಿತು ಚಾಸಾ.9 ರವರಿಂದ ನಿಪಿ.8 ರಂತೆ ವರದಿ ಪಡೆದಿದ್ದು,ನಂತರ ಚಾಸಾ.7 ರವರಿಗೆ ದ್ವಿ ಚಕ್ರ ವಾಹನದ ನಷ್ಟ ಭರ್ತಿ ಪ್ರಮಾಣ ಪತ್ರ ನಿಪಿ.7 ರಂತೆ ಪಡೆದು ಬಿಡುಗಡೆಗೊಳಿಸಿ, ದಿನಾಂಕ 03.08.2018 ರಂದು ಚಾಸಾ.3 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ.10 ರವರಿಂದ ನಿಪಿ.3 ರಂತೆ ಪಡೆದಿದ್ದು, ನಂತರ ಆರೋಪ ಸಾಬೀತಾದ ಕಾರಣ, ಆರೋಪಿಯ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿರುವುದಾಗಿ ನುಡಿದಿರುತ್ತಾರೆ **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ?**

**ಉತ್ತರಃ-**

**ಪ್ರಶ್ನೆ-8**:-ನಿಮಗೆ ಇದಕ್ಕೆ ಹೆಚ್ಚಿಗೆ ಏನಾದರೂ ಹೇಳುವುದಿದೆಯೇ?

**ಉತ್ತರಃ-**

**ಪ್ರಶ್ನೆ-9**:-ನಿಮ್ಮ ಪರವಾಗಿ ಸಾಕ್ಷಿಗಳು ಇದ್ದಾರೆಯೇ?

**ಉತ್ತರಃ-**

(ದಿನಾಂಕ **24.04.2026** ರಂದು ಈ ಮೇಲಿನಂತೆ ಆರೋಪಿಗೆ ಪ್ರಶ್ನಿಸಿ ಅವರು ನೀಡಿದ ಉತ್ತರವನ್ನು ಬರೆದುಕೊಳ್ಳಲಾಗಿದೆ)

**Sd/-**
**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಕುಣಿಗಲ್.**